ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

(11)

ಇಲಾಖೆ / ವಿಷಯ : DEPARTMENT / SUBJECT: ______________________

ಪತ್ರಿಕೆಯ ಹೆಸರು : NAME OF THE NEWS PAPER: ______________ ದಿನಾಂಕ : DATE : 21/1/21

---

ಸಂಪಾದಕೀಯ
EDITORIAL

# ಆಡಳಿತ ಯಂತ್ರಕ್ಕೆ ಚುರುಕು

## ಎಂಟೂವರೆ ಗಂಟೆ ಸಭೆ ನಡೆಸಿದ ಸಿಎಂ

ಬಹುಶಃ ಅಧಿಕಾರಕ್ಕೆ ಬಂದು ಒಂದೂವರೆ ವರ್ಷದ ಬಳಿಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಇದೇ ಮೊದಲ ಬಾರಿಗೆ ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಈ ಸರಕಾರದ ಆರಂಭದಲ್ಲಿ ಪ್ರವಾಹ ಪರಿಸ್ಥಿತಿ, ಸಚಿವ ಸಂಪುಟ ರಚನೆಯ ಗೊಂದಲ, ಉಪ ಚುನಾವಣೆಗಳು ಮುಗಿದು ಇನ್ನೇನು ಆಡಳಿತವು ಟೇಕ್ ಆಫ್ ಆಗಬೇಕು ಎನ್ನುವಷ್ಟರಲ್ಲಿ ಕೊರೊನಾ ಸೃಷ್ಟಿಸಿದ ಬಿಕ್ಕಟ್ಟು ಇಡೀ ವ್ಯವಸ್ಥೆಯನ್ನು ಜಡವಾಗಿಸಿತ್ತು. ಹಳ್ಳಿಯಿಂದ ರಾಜಧಾನಿಯವರೆಗೂ ಅಧಿಕಾರಿಗಳು, ನೌಕರರು, ಸಿಬ್ಬಂದಿ ಕೋವಿಡ್ ಕಾರ್ಯದಲ್ಲಿ ತೊಡಗಿದ್ದರಿಂದ ರಾಜ್ಯದ ಜನರಿಗೆ ಸರಕಾರ ನಿಸ್ತೇಜಗೊಂಡಿದೆ ಎಂಬ ಭಾವನೆಯಿತ್ತು; ಹಲವು ಅಭಿವೃದ್ಧಿ ಕೆಲಸಗಳು ನಿಂತಲ್ಲೇ ನಿಂತಿದ್ದವು. ಈಗ ಸಿಎಂ ಯಡಿಯೂರಪ್ಪ ಅವರು, ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ(ಸಿಇಒ)ಗಳ ಜತೆ ಸುಮಾರು ಎಂಟೂವರೆ ಗಂಟೆ ಮ್ಯಾರಾಥಾನ್ ಸಭೆ ನಡೆಸಿ ಚುರುಕು ಮುಟ್ಟಿಸಿದ್ದಾರೆ. ಜಡ್ಡು ಗಟ್ಟಿದ್ದ ಆಡಳಿತ ವರ್ಗಕ್ಕೆ



ಎಚ್ಚರಿಕೆಯನ್ನು ರವಾನಿಸುವುದರ ಜೊತೆಗೆ, ತಕ್ಷಣಕ್ಕೆ ಕೈಗೊಳ್ಳಬೇಕಾದ ಕೆಲಸಗಳ ಪಟ್ಟಿಯನ್ನು ಒದಗಿಸಿದ್ದಾರೆ. ಆ ಮೂಲಕ, ಆಡಳಿತ ಯಂತ್ರದ ವೇಗವನ್ನು ಹೆಚ್ಚಿಸಲು ಪ್ರಯತ್ನಿಸಿದ್ದಾರೆ.

ಸಿಎಂ ಯಡಿಯೂರಪ್ಪ ಅವರು ಮಾಡುತ್ತಿರುವ ಈ ಪ್ರಯತ್ನ ಶ್ಲಾಘನೀಯ. ಒಂದೆಡೆ ಕೋವಿಡ್, ಮತ್ತೊಂದೆಡೆ ಉದ್ಯೋಗಗಳ ನಷ್ಟದಿಂದ ಕಂಗಾಲಾಗಿರುವ ಜನರಿಗೆ ಸರಕಾರದ ಸಹಾನುಭೂತಿ ಬೇಕು. ಜನಪರ ಕಲ್ಯಾಣ ಯೋಜನೆಗಳು ಯಾವುದೇ ಅಡ್ಡಿಯಿಲ್ಲದೇ, ವಿಳಂಬಕ್ಕೆ ಅವಕಾಶವಿಲ್ಲದೇ ಸಿಗಬೇಕು. ಗ್ರಾಮ, ತಾಲೂಕು ಮಟ್ಟದಲ್ಲಿ ಜನರ ಕೆಲಸಗಳು ಫಟಾಫಟ್ ಆಗ ತೊಡಗಿದರೆ ಸರಕಾರದ ಬಗ್ಗೆ ಉತ್ತಮ ಭಾವನೆ ಮೂಡಲಾರಂಭಿಸುತ್ತದೆ. ಈ ಹಿನ್ನೆಲೆಯಲ್ಲಿ ಇಂಥ ಪರಿಶೀಲನಾ ಸಭೆಗಳು ಅಗತ್ಯ. ಅದರಲ್ಲೂ ಸರಕಾರದ ನೇತೃತ್ವ ವಹಿಸಿರುವ ಮುಖ್ಯಮಂತ್ರಿಗಳೇ ಖುದ್ದು ಅಖಾಡಕ್ಕೆ ಇಳಿದರೆ ಅದರ ಪರಿಣಾಮ ಭಿನ್ನವಾಗಿರುತ್ತದೆ ಎಂಬುದಕ್ಕೆ ಈ ಹಿಂದಿನ ಅನೇಕ ಮುಖ್ಯಮಂತ್ರಿಗಳ ಕಾರ್ಯಶೈಲಿಯನ್ನು ಉದಾಹರಣೆಯಾಗಿ ನೀಡಬಹುದು. ಆದರೆ, ಮುಖ್ಯಮಂತ್ರಿಗಳ ಈ ಪ್ರಯತ್ನ ಕೇವಲ ಒಂದೇ ದಿನಕ್ಕೆ ಸೀಮಿತವಾಗಬಾರದು. ನಿಯಮಿತವಾಗಿ ಇಂಥ ಪರಿಶೀಲನೆಯ ಸಭೆಗಳನ್ನು ಕೈಗೊಂಡು, ಅಧಿಕಾರಿಗಳ ವರ್ಗಕ್ಕೆ ತಾವು ನೀಡಿದ ಗುರಿ ಈಡೇರಿದೆಯೇ ಇಲ್ಲವೇ ಎಂಬುದನ್ನು ಪುನರ್ ಪರಿಶೀಲಿಸುತ್ತಿರಬೇಕು. ನಿರಂತರ ಫಾಲೋಅಪ್‌ನಿಂದ ಮಾತ್ರವೇ ಆಡಳಿತ ಯಂತ್ರ ಚುರುಕಾಗಿರಲು ಸಾಧ್ಯ. ಯಾವುದೇ ಸರಕಾರವಾಗಿರಲಿ ಅದರ ಯಶಸ್ಸು ಮತ್ತು ವೈಫಲ್ಯವು ಅಧಿಕಾರಿಗಳ ವರ್ಗದ ಕಾರ್ಯಕ್ಷಮತೆಯ ಮೇಲೆ ಅವಲಂಬಿತವಾಗಿರುತ್ತದೆ. ಆಡಳಿತ ವ್ಯವಸ್ಥೆಗೆ ಸರಕಾರದ ಮುಖ್ಯಸ್ಥರು, ಆಯಾ ಇಲಾಖೆಗಳ ಸಚಿವರು, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸೂಕ್ತ ಮಾರ್ಗದರ್ಶನದ ಎಚ್ಚರಿಕೆ ಮತ್ತು ಚುರುಕು ಮುಟ್ಟಿಸುವ ಕೆಲಸವನ್ನು ಮಾಡುತ್ತಲೇ ಇರಬೇಕು. ಈಗಾಗಲೇ ಮುಖ್ಯಮಂತ್ರಿಗಳು ಆಯಾ ಜಿಲ್ಲಾಧಿಕಾರಿಗಳು, ಜಿಪಂ ಸಿಇಒಗಳಿಗೆ ಕೆಲಸದ ಪಟ್ಟಿಯನ್ನು ಒದಗಿಸಿದ್ದಾರೆ. ಅದರಲ್ಲಿ ಒಂದಿಷ್ಟಾದರೂ ವಾಸ್ತವದಲ್ಲಿ ಕಾರ್ಯರೂಪಕ್ಕೆ ಬಂದರೆ ಫಲಾನುಭವಿಗಳಿಗೆ ಸರಕಾರದ ಯೋಜನೆಗಳು ಲಾಭ ದೊರೆಯಲಿದೆ. ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಸಾಂಗೋಪಾಂಗವಾಗಿ ನೆರವೇರಲು ಸಾಧ್ಯವಾಗುತ್ತದೆ. ಕೊರೊನಾ ಹಿನ್ನೆಲೆಯಲ್ಲಿ ಆಡಳಿತ ವರ್ಗ ಈ ಹಿಂದೆಂದಿಗಿಂತಲೂ ಈಗ ಹೆಚ್ಚು ಸಕ್ರಿಯವಾಗಿ ಕೆಲಸ ಮಾಡಬೇಕಾದ ಅಗತ್ಯವಿದೆ ಮತ್ತು ಅದರಿಂದ ಕೆಲಸ ತೆಗೆದುಕೊಳ್ಳಬೇಕಾದ ಹೊಣೆಗಾರಿಕೆ ಸರಕಾರದ ಮೇಲಿದೆ. ಸಿಎಂ ಆಗ ಆರಂಭಿಸಿರುವ ಚುರುಕು ಮುಟ್ಟಿಸುವ ಕೆಲಸ ಕೇವಲ ಒಂದೇ ಸೀಮಿತವಾಗಿರದೇ ನಿರಂತರವಾಗಿ ನಡೆಸಿಕೊಂಡು ಹೋಗಬೇಕು.